ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.1604/2021

ದಿನಾಂಕಃ18.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಿ.ಡಬ್ಲ್ಯೂಃ 1 ಸಿ.ಡಬ್ಲ್ಯೂಃ 1

ಸಾಕ್ಷಿಯ ಹೆಸರು ಃ ಹರೀಶ್
ತಂದೆಯ ಹೆಸರು ಃ ಬಸವರಾಜಪ್ಪ
ವಯಸ್ಸು ಃ 42 ವರ್ಷ
ಉದ್ಯೋಗ ಃ ವ್ಯವಸಾಯ
ವಾಸ ಃ ಬಾನೂರು.

**ಮುಖ್ಯ ವಿಚಾರಣೆಃ** ಮಾನ್ಯ ಸ ಸ ಅ ಅವರಿಂದಃ-

ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ನನ್ನ ದೂರದ ಸಂಬಂಧಿಗಳು.

ದಿನಾಂಕ 07.03.2021 ರಂದು ಬೆಳಗ್ಗೆ 09.00 ಗಂಟೆಗೆ ಬಾಣಾವಾರ ಗ್ರಾಮದಲ್ಲಿ ಕೊಳವೆ ಬಾವಿಯ ಬೋರ್ ಪಾಯಿಂಟ್ ಅನ್ನು ನನ್ನ ತಂದೆಯವರಾದ ಬಸವರಾಜಪ್ಪ ರವರು ಮಾಡುತ್ತಿದ್ದರು. ಅದೇ ದಿನ ಮಧ್ಯಾಹ್ನ 01.00 ಗಂಟೆಗೆ ಬೋರ್ ವೆಲ್ ಗಾಡಿ ನಮ್ಮ ಚಿಕ್ಕಪ್ಪ ರವರ ತೋಟಕ್ಕೆ ಬಂದು ಅನಂತರ ನಾವು ಕೊಳವೆ ಬಾವಿಯನ್ನು ಕೊರೆಸಿದೆವು. ಕೊಳವೆ ಬಾವಿಯನ್ನು ಕೊರೆಸಿ ಸಂಜೆ 06.00 ಗಂಟೆಗೆ ನಾನು ಮತ್ತು ನನ್ನ ತಂದೆ ನಮ್ಮ ಮನೆಗೆ ಬಂದಿರುತ್ತೇವೆ. ಅದೇ ರೀತಿ ನನ್ನ ಚಿಕ್ಕಪ್ಪ ರವರು ಸಹ ಅವರ ಮನೆಗೆ ಹೋಗಿರುತ್ತಾರೆ. ಅದೇ ದಿನ ರಾತ್ರಿ 09.00 ಗಂಟೆಗೆ 1 ಮತ್ತು 2 ನೇ ಆರೋಪಿತರು ನಮ್ಮ ಮನೆಯ ಬಳಿ ಬಂದು ನನಗೆ ಅವಾಚ್ಯ ಶಬ್ದಗಳಿಂದ ಬೋಳಿ ಮಗನೆ, ಸೂಳೆ ಮಗನೆ ಎಂದು ಹೇಳಿ ನಮ್ಮ ಕೊಳವೆ ಬಾವಿ ಪಕ್ಕ ನೀನು ಕೊಳವೆ ಬಾವಿ ಕೊರೆಸಿರುತ್ತೀಯಾ ಎಂದು ಬೈದಿರುತ್ತಾರೆ. 1 ಮತ್ತು 2 ನೇ ಆರೋಪಿತರು ನನ್ನ ತಂದೆ ತಾಯಿಯವರಿಗೆ ಸೂಳೆ ಮಕ್ಕಳ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ನಾನು ಹಾಗೂ 1 ಮತ್ತು 2 ನೇ ಆರೋಪಿತರನ್ನು ಕುರಿತು ಈ ಬಗ್ಗೆ ಕೇಳಿದಾಗ ನನ್ನ ಮೇಲೆ 1 ಮತ್ತು 2 ನೇ ಆರೋಪಿತರು ಕೈಯಿಂದ ಹೊಡೆದು ಹಲ್ಲೆ ಮಾಡಿರುತ್ತಾರೆ ಮತ್ತು 1 ಮತ್ತು 2 ನೇ

ಆರೋಪಿತರು ನನಗೆ ಕೊಲೆ ಬೆದರಿಕೆಯನ್ನು ಹಾಕಿರುತ್ತಾರೆ. ಅಷ್ಟರಲ್ಲಿ ಚಾಸಾ 4 ಮತ್ತು 5 ರವರು ಅಲ್ಲಿಗೆ ಬಂದು ಜಗಳವನ್ನು ಬಿಡಿಸಿರುತ್ತಾರೆ.

ಮಾರನೇ ದಿನ ದಿನಾಂಕ 08.03.2021 ರಂದು 3 ನೇ ಆರೋಪಿಯು ರಾತ್ರಿ 07.30 ಗಂಟೆಗೆ ಮನೆಯ ಬಳಿ ಬಂದು ನನಗೆ ಅವಾಚ್ಯ ಶಬ್ದದಿಂದ ನಿಂದಿಸಿರುತ್ತಾರೆ ಮತ್ತು ನನ್ನ ಕುಟುಂಬದ ಸದಸ್ಯರಿಗೂ ಸಹ ನಿಂದಿಸಿರುತ್ತಾರೆ. 3 ನೇ ಆರೋಪಿಯು screw driver ನಿಂದ ನನ್ನ ಹೊಟ್ಟೆಗೆ ಚುಚ್ಚಿ ರಕ್ತಗಾಯಪಡಿಸಿರುತ್ತಾರೆ. ಅಷ್ಟರಲ್ಲಿ ಚಾಸಾ 6 ರಿಂದ 8 ರವರು ಅಲ್ಲಿಗೆ ಬಂದು ಜಗಳವನ್ನು ಬಿಡಿಸಿರುತ್ತಾರೆ. ಆ ಸಮಯದಲ್ಲಿನನಗೆ ಸುಸ್ತಾಗಿ ಕೆಳಗೆ ಕುಳಿತಿರುತ್ತೇನೆ. 3 ನೇ ಆರೋಪಿಯು screw driver ಅನ್ನು ಘಟನಾ ಸ್ಥಳದಲ್ಲಿ ಬಿಟ್ಟು ಹೋಗಿರುತ್ತಾರೆ. ಅನಂತರ ನನ್ನನ್ನುಚಾಸಾ 6 ರವರು ಅಜ್ಜಂಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಗೆ ಅಜ್ಜಂಪುರ ಪೊಲೀಸರು ಬಂದು ಎಲ್ಲಾವನ್ನು ನೋಡಿಕೊಂಡು ಹೋಗಿರುತ್ತಾರೆ. ಆನಂತರ ನಾನು ಅಜ್ಜಂಪುರ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರನ್ನು ದಾಖಲು ಮಾಡಿರುತ್ತೇನೆ.

ದಿಃ 09.03.2021 ರಂದು ಪೊಲೀಸರು ಘಟನಾ ಸ್ಥಳಕ್ಕೆ ಬಂದು ಮಹಜರ್ ಅನ್ನು ಜರುಗಿಸಿರುತ್ತಾರೆ. ಸದರಿ ಸಮಯದಲ್ಲಿ screw driver ಅನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ಚಾಸಾ 2 ಮತ್ತು 3 ರವರು ಹಾಜರಿರುತ್ತಾರೆ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಲಿಖಿತ ದೂರು ಆಗಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಈಗ ಇನ್ನೊಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಯು ಸ್ಥಳ/ಅಮಾನತ್ತು ಪಂಚನಾಮೆ ಆಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದಲ್ಲಿ ಹಾಜರುಪಡಿಸಿರುವ screw driver ಅನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿತರ ಪರ ವಕೀಲರಿಂದಃ-

ಚಾಸಾ 4 ನನಗೆ ಚಿಕ್ಕಪ್ಪ ಆಗಬೇಕು. ನನ್ನ ಚಿಕ್ಕಪ್ಪನ ಮನೆ ವ್ಯವಹಾರ ಬೇರೆ ನಮ್ಮ ಮನೆ ವ್ಯವಹಾರ ಬೇರೆ ಎಂದರೆ ಸರಿ. ನಾನು ಹಾಗೂ ಚಾಸಾ 4 ಬೇರೆ ಬೇರೆ ವ್ಯವಸಾಯ ಮಾಡುತ್ತೇವೆ ಎಂದರೆ ಸರಿ. ದೊಡ್ಡಯ್ಯ ರವರಿಗೆ ಸೇರಿದ ಜಮೀನಿನ ಸರ್ವೇ ನಂಬರ್ 3. ಸರ್ವೇ ನಂಬರ್ 3 ರಲ್ಲಿ ಬೋರ್ ಕೊರೆಸಲು ಹೋಗಿದ್ದೇವು ಎಂದು ನಿಪಿ1 ರಲ್ಲಿ ನಮೂದು ಮಾಡಿರುತ್ತೇನೆ. ಬೋರ್ ಕೊರೆಸಿದ ಜಾಗಕ್ಕೆ ಪೊಲೀಸರನ್ನು ಕರೆದುಕೊಂಡು ಹೋಗಿ ಅವರಿಗೆ ಜಾಗವನ್ನು ತೋರಿಸಿರುವುದಿಲ್ಲ. ನನ್ನ ತಂದೆ ಬೋರ್ ಪಾಯಿಂಟ್ ಮಾಡುತ್ತಾರೆಂದು ತೋರಿಸಲು ಅವರ ಬಳಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ಯಾವುದೇ ಬೋರ್ ಪಾಯಿಂಟ್ ಅನ್ನು ಮಾಡುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರು ಯಾವುದೇ ಬೋರ್ ಅನ್ನು ಕೊರೆಸಿಲ್ಲ ಎಂದರೆ ಸರಿಯಲ್ಲ. ಚಾಸಾ 4 ರವರ ಜಮೀನಿನ ಪಕ್ಕದಲ್ಲಿ ಆರೋಪಿತರಿಗೆ ಸೇರಿದ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 08.03.2021 ರಂದು 1 ಮತ್ತು 2 ನೇ ಆರೋಪಿತರು ನಮ್ಮ ಮನೆಯ ಬಳಿ ಬಂದಿರುವುದಿಲ್ಲಹಾಗೂ ಯಾವುದೇ ಜಗಳ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾ 1 ತರಹದ screw driver ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿ. ಆರೋಪಿತರು ನನಗೆ ಯಾವುದೇ ಅವಾಚ್ಯ ಶಬ್ದದಿಂದ ಬೈದಿರುವುದಿಲ್ಲ ಹಾಗೂ ಹಲ್ಲೆ ಮಾಡಿರುವುದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ2 ರ ಮಹಜರ್ ಜರುಗಿಸಿದ ಸ್ಥಳ ರಂಗಪ್ಪ ರವರಿಗೆ ಸೇರಿದ ಜಮೀನು ಆಗಿರುತ್ತದೆ. ಸದರಿ ಆಸ್ತಿಯ ಅಸೆಸ್ಮಂಟ್ ನಂಬರ್ 68 ಆಗಿರುತ್ತದೆ. ಪೊಲೀಸರು ಸ್ಥಳಕ್ಕೆ ಬಂದಿಲ್ಲ ಅಲ್ಲಿ ಯಾವುದೇ ಮಹಜರ್ ಜರುಗಿಸಿಲ್ಲ ಎಂದರೆ ಸರಿಯಲ್ಲ.

ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಮು ಮಾ 1 ಕ್ಕೂ

ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ</u> :** ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು
ಹೆ.ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.